

# ಕಚ್ಚಿದ ಸೇಬಿಗೆ ಅಷ್ಟೊಂದು ದುಡ್ಡೇ?

■ ಶಶಿ



ಆ್ಯಪಲ್ ಫೋನ್ ಅಥವಾ ಐಫೋನ್ ನೋಡಿದಾಗಲೆಲ್ಲಾ ಆ ಮೊಬೈಲ್‌ಫೋನ್‌ಗೆ ಅಷ್ಟೊಂದು ಹಣ ಏಕೆ ಎಂಬ ಪ್ರಶ್ನೆ ಮೂಡುತ್ತದೆ.

ಕಚ್ಚಿದ ಸೇಬಿನ ಲಾಂಛನವನ್ನು ಹೊಂದಿರುವ ಆ್ಯಪಲ್ ಸಂಸ್ಥೆಯ ಎಲ್ಲ ಮೊಬೈಲ್‌ಫೋನುಗಳು ದುಬಾರಿ. ಈ ಫೋನು ಖರೀದಿಸಬೇಕೆಂಬ ಬಯಕೆ ಹಲವರ ಮನದಲ್ಲಿದ್ದರೂ ಆದರ ಬೆಲೆ ಕೇಳಿ ಸುಮ್ಮನಾಗುತ್ತಾರೆ. ಇದಕ್ಕೆ ಅಷ್ಟೊಂದು ಹಣ ಏಕೆ ಸುರಿಯಬೇಕು ಎಂದು ಯೋಚಿಸುತ್ತಾರೆ. ಅಷ್ಟಕ್ಕೂ ಈ ಫೋನು ಅಷ್ಟೊಂದು ದುಬಾರಿ ಏಕೆ?

## ಸಂಪೂರ್ಣ ಸ್ವಾವಲಂಬನೆ

ಹಲವು ಆ್ಯಂಡ್ರಾಯ್ಡ್ ಸ್ಮಾರ್ಟ್ ಫೋನುಗಳಿಗೂ ಹಾಗೂ ಆ್ಯಪಲ್ ಫೋನುಗಳಿಗೆ ಸಾಕಷ್ಟು ವ್ಯತ್ಯಾಸವಿದೆ. ಅವುಗಳಲ್ಲಿ ಮುಖ್ಯವಾದವು ಎಂದರೆ, ಆ್ಯಪಲ್ ಕಂಪನಿಯು ತನ್ನ ಫೋನುಗಳಿಗೆ ಅಗತ್ಯವಾದ ಪ್ರತಿಯೊಂದು ಹಾರ್ಡ್‌ವೇರ್ ವಸ್ತುಗಳನ್ನು ತಾನೇ ಉತ್ಪಾದಿಸುತ್ತದೆ. ಜೊತೆಗೆ ಸಾಫ್ಟ್‌ವೇರ್ ಅನ್ನೂ. ಆ್ಯಪಲ್ ಫೋನಿಗೆ ಬಹುದೊಡ್ಡ ಸ್ಪರ್ಧಿ ಸ್ಯಾಮ್‌ಸಂಗ್ ಕಂಪನಿ. ಸ್ಯಾಮ್‌ಸಂಗ್ ಕಂಪನಿಯು ಮೊಬೈಲ್‌ಗಳನ್ನು ಉತ್ಪಾದಿಸಿ, ಅದು ಕಾರ್ಯ ನಿರ್ವಹಿಸಲು ಗೂಗಲ್ ಕಂಪನಿಯ ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂ (ಓಎಸ್) ಮೇಲೆ ಅವಲಂಬಿತವಾಗಿದೆ. ಆದರೆ, ಆ್ಯಪಲ್ ಕಂಪನಿಯು ತನ್ನದೇ ಸಾಫ್ಟ್‌ವೇರ್ ಅನ್ನು ಬಳಸುವ ಮೂಲಕ ಸಂಪೂರ್ಣ ಸ್ವಾವಲಂಬಿಯಾಗಿದೆ. ಹೀಗಾಗಿಯೇ ಸಹಜವಾಗಿ ಆ್ಯಪಲ್ ಫೋನುಗಳ ಬೆಲೆ ಹೆಚ್ಚಿರುತ್ತದೆ

## ಸದಾ ಹೊಸತು...

ಸದಾ ಏನಾದರೊಂದು ಹೊಸತನ್ನು ಗ್ರಾಹಕರಿಗೆ ಪರಿಚಯಿಸಬೇಕು, ಅವರ ಗಮನ ಸೆಳೆಯಬೇಕು ಎಂದು ಆ್ಯಪಲ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ದುಡಿದ ಸ್ಟೀವ್ ಜಾಬ್ಸ್ ಹಾತೊರೆಯುತ್ತಿದ್ದರು. ಗುಣಮಟ್ಟದಲ್ಲಿ ರಾಜಿಯಾಗಬಾರದು ಎಂಬುದು ಅವರ ಸಿದ್ಧಾಂತ. ಹೊಸ ಫೋನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮುನ್ನ ಏನಾದರೊಂದು ಹೊಸ ವೈಶಿಷ್ಟ್ಯವನ್ನು ಅಳವಡಿಸುತ್ತಿದ್ದರು. ಹೀಗಾಗಿಯೇ ಉಳಿದ ಮೊಬೈಲ್ ಸಂಸ್ಥೆಗಳಿಗೆ ಹೋಲಿಸಿದರೆ ಆ್ಯಪಲ್ ಕಂಪನಿಯ ಸಾಧನಗಳು ಗ್ರಾಹಕರ ಗಮನ ಸೆಳೆಯುತ್ತಿವೆ. ಈಗಲೂ ಆ್ಯಪಲ್ ಫೋನು ಹೊಸದೊಂದು ವೈಶಿಷ್ಟ್ಯತೆ ಅಥವಾ ಫೀಚರ್‌ನೊಂದಿಗೆ ಮಾರುಕಟ್ಟೆಗೆ ಬರುವ ಪದ್ಧತಿಯನ್ನು ಉಳಿಸಿಕೊಂಡಿದೆ.

## ಹೊಸ ಸಂಶೋಧನೆಗಳು

ಸದಾ ಹೊಸತನ್ನು ಪರಿಚಯಿಸುವ ಉದ್ದೇಶದಿಂದ ಆ್ಯಪಲ್ ಸಂಸ್ಥೆಯು ಸದಾ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದೆ. ಇದಕ್ಕಾಗಿ ಅಮೆರಿಕ ಕ್ಯಾಲಿಫೋರ್ನಿಯಾದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಘಟಕವನ್ನು ಹೊಂದಿದೆ. ಇಲ್ಲಿ ತಜ್ಞ ಮತ್ತು ನುರಿತ ಸಿಬ್ಬಂದಿಯನ್ನೇ ನೇಮಕ ಮಾಡಿಕೊಳ್ಳುತ್ತದೆ. ಇತರೆ ವಿಭಾಗಗಳಿಗೆ ಹೋಲಿಸಿದರೆ ಈ ವಿಭಾಗಕ್ಕೆ ಹೆಚ್ಚು ಹಣ ವ್ಯಯಿಸುತ್ತಿದೆ. ಸಿಬ್ಬಂದಿಗೂ ಲಕ್ಷಗಟ್ಟಲೇ ಸಂಬಳ ನೀಡುತ್ತಿದೆ. ಅದರ ಹೊರೆಯನ್ನು ಸರಿದೂಗಿಸಲು ಈ ಫೋನ್ ಬೆಲೆ ಏರಿಸಲಾಗಿದೆ. ಇದು ಸಹ ಈ ಫೋನಿನ ದುಬಾರಿತನಕ್ಕೆ ಒಂದು ಕಾರಣ.

## ಕನ್ನ ಹಾಕುವುದು ಕಷ್ಟ

ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂ ಆಧಾರಿತ ಸ್ಮಾರ್ಟ್‌ಫೋನುಗಳನ್ನು ಹ್ಯಾಕ್ ಮಾಡಿ, ಅದರಲ್ಲಿನ ಬಳಕೆದಾರರ ಖಾಸಗಿ ಮಾಹಿತಿಗೆ ಕನ್ನ ಹಾಕಬಹುದಾದ ಮಾಲ್‌ವೇರ್‌ಗಳು ತಂತ್ರಜ್ಞಾನ ಕ್ಷೇತ್ರದಲ್ಲಿ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿವೆ. ಆದರೆ, ಮೊಬೈಲ್‌ಗಳನ್ನು ಹ್ಯಾಕ್ ಮಾಡಲು ಬಳಸುವ ಮಾಲ್ಸ್‌ವೇರ್‌ಗಳನ್ನು ಬಳಸಿ ಐಫೋನ್‌ಗಳನ್ನು ಹ್ಯಾಕ್ ಮಾಡುವುದು ಬಹಳ ಕಷ್ಟ. ಬಳಕೆದಾರರ ಖಾಸಗಿತನಕ್ಕೆ ಧಕ್ಕೆಯಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಆ್ಯಪಲ್ ಕಂಪನಿಯು ದಕ್ಷತೆ ಹಾಗೂ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿದೆ.

ಐಫೋನ್ ಖರೀದಿಸುವವರ ಸಂಖ್ಯೆ ಕಡಿಮೆ. ಹೀಗಾಗಿ ಕನ್ನ ಹಾಕುವವರು ಹೆಚ್ಚಾಗಿ ಆಂಡ್ರಾಯ್ಡ್ ಫೋನುಗಳತ್ತ ಗಮನ ಹರಿಸುತ್ತಾರೆ. ಆಂಡ್ರಾಯ್ಡ್ ಫೋನುಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಅವರು ಮಾಲ್‌ವೇರ್‌ಗಳನ್ನು ಅಭಿವೃದ್ಧಿಪಡಿಸುತ್ತಾರೆ. ಕಾರಣ ಮಾಲ್‌ವೇರ್‌ಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಆಗುವ ಖರ್ಚು ಹಿಂಪಡೆಯುವ ಉದ್ದೇಶ ಅವರದ್ದು. ಐಫೋನ್ ಮತ್ತು ಆಂಡ್ರಾಯ್ಡ್ ಫೋನುಗಳ ಬಳಕೆದಾರರ ಅನುಪಾತದಲ್ಲಿ ಅಜಗಜಾಂತರವಿದೆ.

## ಜಾಹೀರಾತಿಗೆ ಹೆಚ್ಚು ಆದ್ಯತೆ

ಯಾವುದೇ ಉತ್ಪನ್ನವನ್ನು ಮಾರುಕಟ್ಟೆಗೆ ತರುವುಷ್ಟೇ ಮುಖ್ಯ ಅದಕ್ಕೆ ಪ್ರಚಾರ ನೀಡುವುದು. ಆ್ಯಪಲ್ ಸಂಸ್ಥೆಯೂ ಇದೇ ಸಿದ್ಧಾಂತ ಪಾಲಿಸುತ್ತಿದ್ದು, ತನ್ನ ಮೊಬೈಲ್‌ಗಳ ಜಾಹೀರಾತಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ವಿಭಿನ್ನ ರೀತಿಯ ಜಾಹೀರಾತಿನ ಮೂಲಕ ಕಂಪನಿಯು ಗ್ರಾಹಕರನ್ನು ತಲುಪಲು ಸಾಕಷ್ಟು ಶ್ರಮಿಸುತ್ತಿದೆ. ಅದಕ್ಕೆಂದು ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿದೆ. ■